# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಹಿಂದುಳಿದ ವರ್ಗಗಳ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳನ್ನು ಪ್ಯಾರಾ ಮೆಡಿಕಲ್ ಕೋರ್ಸುಗಳಿಗೆ ನಿಯೋಜಿಸುವ ಬಗ್ಗೆ.

ಓದಲಾಗಿದೆ : 1) ಪತ್ರ ಸಂಖ್ಯೆ: ಹಿಂವಕನಿ/ವಿವೇ-2/ಸಿಆರ್-33/2010-11 ದಿನಾಂಕ:18-03-2011.

******

**ಪ್ರಸ್ತಾವನೆ:-**

ರಾಜ್ಯದಲ್ಲಿ ವೈದ್ಯಕೀಯ ಕಾಲೇಜುಗಳು ಹಾಗೂ ವೈದ್ಯಕೀಯ ಸಂಸ್ಥೆಗಳು ನಡೆಸುತ್ತಿರುವ ವಿವಿಧ ಪ್ಯಾರಾ ಮೆಡಿಕಲ್ ಕೋರ್ಸುಗಳಿಗೆ ಹಿಂದುಳಿದ ವರ್ಗಗಳ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳನ್ನು ನಿಯೋಜಿಸಲು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು. ಇವರು ಮೇಲೆ ಕ್ರ.ಸಂ.(1)ರ ಓದಲಾದ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ : ಸಕಇ 96 ಬಿಎಂಎಸ್ 2011, ದಿನಾಂಕ:22-09-2011**

1) ಕರ್ನಾಟಕ ಪ್ಯಾರಾ ಮೆಡಿಕಲ್ ಮಂಡಳಿಯ ಮಾನ್ಯತೆ ಪಡೆದ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಈ ಕೆಳಕಂಡ ಕೋರ್ಸ್‌ಗಳಿಗೆ ಹಿಂದುಳಿದ ವರ್ಗಗಳ ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳನ್ನು ತರಬೇತಿ ನೀಡಲು ಮಂಜೂರಾತಿ ನೀಡಲಾಗಿದೆ.

ನಿರ್ದೇಶಕರ ಕಚೇರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು
22 SEP 2011

(i) Diploma in Medical Laboratory Technology,
(ii) Diploma in X-ray Technology,
(iii) Diploma in Operation Theater Technology,
(iv) Diploma in Ophthalmic Technology,
(v) Diploma in Medical Records Technology,
(vi) Diploma in Dental Mechanics
(vii) Diploma in Dental Hygienist
(viii) Diploma in Dailysis Technology.

ಯೋಜನಾ ವಿವರಗಳು ಮತ್ತು ಷರತ್ತುಗಳು :-

| ಕ್ರ. ಸಂ. | ಐಟಂ | ಸಂಕ್ಷಿಪ್ತ ವಿವರ | |
|---|---|---|---|
| 1 | ವಿದ್ಯಾರ್ಹತೆ | ಎಸ್.ಎಸ್.ಎಲ್.ಸಿ./ಪಿ.ಯು.ಸಿ. ವಿಜ್ಞಾನ ವಿಭಾಗ (ಪಿಸಿಎಂಬಿ) | |
| | | ಮೇಲ್ಕಂಡ ಪರೀಕ್ಷೆಯಲ್ಲಿ ಗಳಿಸಿದ ಕನಿಷ್ಠ ಅಂಕಗಳು – 45% ಪ್ರತಿಶತ ಮತ್ತು ಅದಕ್ಕೂ ಹೆಚ್ಚು | |
| 2 | ಕೋರ್ಸ್ ಅವಧಿ | I. ಎಸ್.ಎಸ್.ಎಲ್.ಸಿ. ಉತ್ತೀರ್ಣರಾದವರಿಗೆ-3 ವರ್ಷ<br>II. ಪಿ.ಯು.ಸಿ (ವಿಜ್ಞಾನ ವಿಭಾಗ) (ಪಿ.ಸಿ.ಎಂ.ಬಿ.) ಉತ್ತೀರ್ಣರಾದವರಿಗೆ -2 ವರ್ಷ | |
| 3 | ವಯೋಮಿತಿ | 17-25 ವರ್ಷ | |
| 4 | ಆದಾಯಮಿತಿ | ವಾರ್ಷಿಕ ರೂ.1.00/- ಲಕ್ಷದೊಳಗಿರಬೇಕು | |
| 5 | ಕೋರ್ಸಿನ ಶುಲ್ಕ | ಉಚಿತ ಸರ್ಕಾರಿ ಸೀಟುಗಳಿಗೆ | ರೂ.2500=00 ವಾರ್ಷಿಕ (ರೂ.500=00 ದಾಖಲಾತಿ ಶುಲ್ಕ, ರೂ.2000=00 ಬೋಧನಾ ಶುಲ್ಕ). |
| | | ಖಾಸಗಿ ಕಾಲೇಜುಗಳಲ್ಲಿನ ಸರ್ಕಾರಿ ಸೀಟುಗಳಿಗೆ | ರೂ.4500=00 ವಾರ್ಷಿಕ (ರೂ.500=00 ದಾಖಲಾತಿ ಶುಲ್ಕ, ರೂ.4000=00 ಬೋಧನಾ ಶುಲ್ಕ) |
| | | ಮ್ಯಾನೇಜ್‌ಮೆಂಟ್ ಸೀಟುಗಳಿಗೆ | ರೂ.15500=00 ವಾರ್ಷಿಕ (ರೂ.500=00 ದಾಖಲಾತಿ ಶುಲ್ಕ, ರೂ.15000=00 ಬೋಧನಾ ಶುಲ್ಕ) |
| 6 | ಆಯ್ಕೆ ಪಟ್ಟಿ ತಯಾರಿಸುವ ವಿಧಾನ | ಪಿ.ಯು.ಸಿ (ವಿಜ್ಞಾನ ವಿಭಾಗ) (ಪಿ.ಸಿ.ಎಂ.ಬಿ) ಮತ್ತು ಎಸ್.ಎಸ್.ಎಲ್.ಸಿ ಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಪಟ್ಟಿ ಮಾಡುವುದು. ಆರ್ಡರ್ ಆಪ್ ಮೆರಿಟ್‌ನಲ್ಲಿ ಈ ಅಭ್ಯರ್ಥಿಗಳಿಗೆ ಸೀಟುಗಳನ್ನು ಅರ್ಹತೆ ಮೇರೆಗೆ ಹಂಚಿಕೆ ಮಾಡತಕ್ಕದ್ದು ಹಾಗೂ ಈ ಕೆಳಕಂಡ ಮೀಸಲಾತಿಯನ್ನು ಅನುಸರಿಸತಕ್ಕದ್ದು.<br>ಹಿಂದುಳಿದ ವರ್ಗಗಳ ಪ್ರವರ್ಗ-1 – 15%<br>ಹಿಂದುಳಿದ ವರ್ಗಗಳ ಪ್ರವರ್ಗ-2ಎ – 53%<br>ಹಿಂದುಳಿದ ವರ್ಗಗಳ ಪ್ರವರ್ಗ-3ಎ – 15%<br>ಹಿಂದುಳಿದ ವರ್ಗಗಳ ಪ್ರವರ್ಗ-3ಬಿ – 17%<br>ಒಟ್ಟು – 100%<br>ಆಯ್ಕೆ ಮಾಡಿದ ಅಭ್ಯರ್ಥಿಗಳ ಪಟ್ಟಿ ಮತ್ತು ಸಭೆ ನಡವಳಿಯನ್ನು ಆಯ್ಕೆ ಸಮಿತಿಯ ಸದಸ್ಯರು ಸಹಿಯೊಂದಿಗೆ ಪ್ರಕಟಣೆ ಮಾಡತಕ್ಕದ್ದು, | |
| 7 | ಪ್ಯಾರಾ ಮೆಡಿಕಲ್ ತರಬೇತಿ ನೀಡುವ ಕಾಲೇಜುಗಳ ಆಯ್ಕೆ | ಖಾಸಗಿ ಪ್ಯಾರಾ ಮೆಡಿಕಲ್ ಕಾಲೇಜುಗಳು ಮೂಲಭೂತ ಸೌಕರ್ಯ, ಬೋಧಕರು, ಗ್ರಂಥಾಲಯ, ಪ್ರಯೋಗಾಲಯಗಳನ್ನು ಹೊಂದಿರುವ ಬಗ್ಗೆ ಮತ್ತು ಸಂಸ್ಥೆಗಳ 3 ವರ್ಷದ ಶೈಕ್ಷಣಿಕ ಸಾಧನೆಯನ್ನು ಗಮನದಲ್ಲಿಟ್ಟುಕೊಂಡು ಕೂಲಂಕಷ ತಪಾಸಣೆ ನಡೆಸಿ ಕಾಲೇಜುಗಳನ್ನು ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡುವುದು. | |
| 8 | ನಿಗದಿಪಡಿಸಿದ ವಾರ್ಷಿಕ ಗುರಿ | ಒಟ್ಟು – 1000 ಅಭ್ಯರ್ಥಿಗಳು | |

ಈ ಯೋಜನೆಗೆ ಅನ್ವಯಿಸುವ ಇತರೆ ಷರತ್ತುಗಳು:-

(1) ಪ್ಯಾರಾ ಮೆಡಿಕಲ್ ಕಾಲೇಜುಗಳು ಕರ್ನಾಟಕ ಸರ್ಕಾರದ ಪ್ಯಾರಾ ಮೆಡಿಕಲ್ ಬೋರ್ಡಿನಿಂದ ಮಾನ್ಯತೆ ಪಡೆದಿರುವ ಬಗ್ಗೆ ದಾಖಲಾತಿಗಳನ್ನು ಪರಿಶೀಲಿಸಿ ಅಭ್ಯರ್ಥಿಗಳನ್ನು ನಿಯೋಜಿಸುವುದು.

(2) ಅಭ್ಯರ್ಥಿಗಳು ಕರ್ನಾಟಕ ರಾಜ್ಯಕ್ಕೆ ಸೇರಿದವರಾಗಿರಬೇಕು. ಅಥವಾ ರಾಜ್ಯದಲ್ಲಿ ಕನಿಷ್ಟ ಏಳು ವರ್ಷಗಳ ಕಾಲ ವ್ಯಾಸಂಗ ಮಾಡಿರಬೇಕು.

(3) ಖಾಸಗಿ ಪ್ಯಾರಾ ಮೆಡಿಕಲ್ ಕಾಲೇಜುಗಳು ಮೂಲಭೂತ ಸೌಕರ್ಯ, ಬೋಧಕರು, ಗ್ರಂಥಾಲಯ, ಪ್ರಯೋಗಾಲಯಗಳನ್ನು ಹೊಂದಿರುವ ಬಗ್ಗೆ ಕೂಲಂಕಷ ತಪಾಸಣೆ ನಡೆಸಿ ಆಯಾ ಕಾಲೇಜುಗಳಲ್ಲಿ ನೀಡುತ್ತಿರುವ ಕೋರ್ಸ್‌ಗಳಲ್ಲಿ ಲಭ್ಯವಿರುವ ಸೀಟುಗಳಿಗೆ ಅನುಗುಣವಾಗಿ ಮತ್ತು ನಿಗದಿಪಡಿಸಿರುವ ಭೌತಿಕ ಗುರಿಗೆ ಅನುಗುಣವಾಗಿ ಅಭ್ಯರ್ಥಿಗಳನ್ನು ತರಬೇತಿಗೆ ನಿಯೋಜಿಸುವುದು.

(4) ಸರ್ಕಾರದ ಆದೇಶ ಸಂಖ್ಯೆ:ಸಕಇ 225 ಬಿಸಿಎ 2000 ದಿನಾಂಕ:30-03-2002ರಲ್ಲಿ ತಿಳಿಸಿರುವ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಅಥವಾ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಅಭ್ಯರ್ಥಿ ಜಾತಿಯು ಸೇರಿರಬೇಕು.

(5) ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡತಕ್ಕದ್ದು.

(6) ಇಲಾಖೆಗಳು ಆಯಾ ವರ್ಷದಲ್ಲಿ ಲಭ್ಯವಿರುವ ಅನುದಾನಕ್ಕೆ ಸೀಮಿತಗೊಳಿಸಿ ಅಭ್ಯರ್ಥಿಗಳ ಸಂಖ್ಯೆ ನಿಗದಿಪಡಿಸಿಕೊಳ್ಳತಕ್ಕದ್ದು.

(7) ಆಯ್ಕೆಯಾದ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ನಿಗಧಿಪಡಿಸಿದ ವೆಚ್ಚವನ್ನು ಜಿಲ್ಲಾ ಮಟ್ಟದ ಅಧಿಕಾರಿಗಳು ಪಾವತಿಸತಕ್ಕದ್ದು.

(8) ಅಭ್ಯರ್ಥಿಗಳಿಗೆ ಆಯಾ ಇಲಾಖೆಗಳು ನಡೆಸುತ್ತಿರುವ ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ನೀಡಬಹುದು.

(9) ಮೊದಲನೇ ವರ್ಷ ಆಯ್ಕೆಯಾದ ಅಭ್ಯರ್ಥಿಗಳು ನಂತರದ ವರ್ಷಗಳಲ್ಲಿ ಪ್ರತಿ ವರ್ಷ ನವೀಕರಣ ಅರ್ಜಿ ಸಲ್ಲಿಸತಕ್ಕದ್ದು.

(10) ತರಬೇತಿ ಪಡೆಯುವ ಅಭ್ಯರ್ಥಿಗಳು ಶಿಕ್ಷಣ ಸಂಸ್ಥೆಯಲ್ಲಿ ಮಾಹೆಯಾನ ಶೇಕಡ 75 ರಷ್ಟು ಮತ್ತು ಅದಕ್ಕೂ ಹೆಚ್ಚಿನ ಹಾಜರಾತಿ ಹೊಂದಿರತಕ್ಕದ್ದು (ಈ ಕುರಿತಂತೆ ಶಾಲಾ : ಕಾಲೇಜಿನ ಪ್ರಾಚಾರ್ಯರಿಂದ ದೃಢೀಕರಿಸಿದ ಹಾಜರಾತಿ ತಃಖ್ತೆ ಪಡೆದು ತರಬೇತಿ ಭತ್ಯೆ ಮಂಜೂರು ಮಾಡುವುದು).

(11) ಅಭ್ಯರ್ಥಿಗಳು ಆಯಾ ಸಾಲಿನ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಉತ್ತೀರ್ಣರಾಗದ ಅಭ್ಯರ್ಥಿಗಳು ತರಬೇತಿ ಭತ್ಯೆ ಪಡೆಯಲು ಅರ್ಹರಾಗಿರುವುದಿಲ್ಲ. ಆದರೆ Carry over system ಇದ್ದಲ್ಲಿ ತರಬೇತಿ ಭತ್ಯೆ ಪಡೆಯಲು ಅರ್ಹರಿರುತ್ತಾರೆ.

(12) ಸುಳ್ಳು ಮಾಹಿತಿ/ಜಾತಿ ಪ್ರಮಾಣ ಪತ್ರ ನೀಡಿ ಪ್ರವೇಶ/ತರಬೇತಿ ಭತ್ಯೆ ಪಡೆದಿದ್ದಲ್ಲಿ ಅಂತಹ ಅಭ್ಯರ್ಥಿಗಳ ತರಬೇತಿಗೆ ನೀಡಲಾದ ಮೊತ್ತವನ್ನು ವಸೂಲಿ ಮಾಡಿ ಸರ್ಕಾರಕ್ಕೆ ಹಿಂದಿರುಗಿಸತಕ್ಕದ್ದು.

(13) ಯಾವುದೇ ಅಭ್ಯರ್ಥಿ ಪ್ಯಾರ ಮೆಡಿಕಲ್ ತರಬೇತಿ ಪೂರ್ಣಗೊಳಸದೆ ಮಧ್ಯದಲ್ಲಿ ಬಿಟ್ಟು ಹೋದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ವಿಚಾರಣೆ ನಡೆಸಿ ಇಲಾಖೆಯ ಮುಖ್ಯಸ್ಥರಿಗೆ ವರದಿ ಸಲ್ಲಿಸತಕ್ಕದ್ದು. ಅಂತಹ ಪ್ರಕರಣಗಳಲ್ಲಿ ಪರಿಶೀಲಿಸಿ ಇಲಾಖಾ ಮುಖ್ಯಸ್ಥರು ಅಂತಿಮ ನಿರ್ಣಯ ತೆಗೆದುಕೊಳ್ಳುವುದು. ಒಂದು ಪಕ್ಷ, ಸಮಂಜಸವಾದ ಕಾರಣವಿಲ್ಲದಿದ್ದಲ್ಲಿ ಸಂಬಂಧಪಟ್ಟ ಅಭ್ಯರ್ಥಿಗಳಗೆ ನೀಡಲಾದ ಮೊತ್ತವನ್ನು ವಸೂಲಿ ಮಾಡಿ ಸರ್ಕಾರಕ್ಕೆ ಹಿಂದಿರುಗಿಸತಕ್ಕದ್ದು. ಇದಕ್ಕೆ ಅನುಗುಣವಾಗಿ ಒಪ್ಪಿರುವ ಬಗ್ಗೆ ವಿದ್ಯಾರ್ಥಿ ಮತ್ತು ಅವರ ತಂದೆ/ತಾಯಿ ಅಥವಾ ಪೋಷಕರು ರೂ.50/--ಗಳ ಛಾಪಾ ಕಾಗದದಲ್ಲಿ ಒಪ್ಪಿಗೆ ಪತ್ರ ನೀಡತಕ್ಕದ್ದು.

(14)

- ಉಲ್ಲೇಖಿತ ಕೋರ್ಸುಗಳಗೆ ಅಭ್ಯರ್ಥಿಗಳನ್ನು ಈ ಕೆಳಕಂಡ ರಾಜ್ಯ ಮಟ್ಟದ ಸಮಿತಿ ಆಯ್ಕೆ ಮಾಡುವುದು.
- ಆಯುಕ್ತರು, ಹಿಂ.ವ.ಕ. ಇಲಾಖೆ – ಅಧ್ಯಕ್ಷರು
- ನಿರ್ದೇಶಕರು ವೈದ್ಯಕೀಯ ಶಿಕ್ಷಣ ಇಲಾಖೆ – ಉಪಾಧ್ಯಕ್ಷರು
- ಮುಖ್ಯಸ್ಥರು ಪ್ಯಾರಾ ಮೆಡಿಕಲ್ ಬೋರ್ಡ್, – ಸದಸ್ಯರು
- ಜಂಟಿ ನಿರ್ದೇಶಕರು (ವಸತಿ ನಿಲಯ) – ಸದಸ್ಯ ಕಾರ್ಯದರ್ಶಿ

(15) ಸದರಿ ಸಮಿತಿ ಕೌನ್ಸಿಲಿಂಗ್ ಮುಖಾಂತರ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಈ ಕೆಳಗಿನಂತೆ ನಿಯೋಜಿಸುವ ವ್ಯವಸ್ಥೆ ಮಾಡತಕ್ಕದ್ದು:-

(ಅ)ಆಯಾ ಇಲಾಖೆಗಳು ಜಿಲ್ಲಾ ಮಟ್ಟದಲ್ಲಿ ಜೂನ್/ಜುಲೈ ತಿಂಗಳಲ್ಲಿ ದಿನಪತ್ರಿಕೆ, ದೂರದರ್ಶನ, ರೇಡಿಯೋ, ಇತರೆ ಮಾಧ್ಯಮಗಳ ಮೂಲಕ ಪ್ರಕಟಣೆ ನೀಡಿ ಅರ್ಹ ಅಭ್ಯರ್ಥಿಗಳಂದ ಅರ್ಜಿಗಳನ್ನು ಆಹ್ವಾನಿಸುವುದು.
(ಆ) ವಿವಿಧ ಸಂಸ್ಥೆಗಳಲ್ಲಿ ಸರ್ಕಾರಿ ಕೋಟಾಕ್ಕೆ ಲಭ್ಯವಿರುವ ಸೀಟುಗಳ ಮಾಹಿತಿ ಪಡೆದು ಕೊಂಡು ಅಭ್ಯರ್ಥಿಗಳನ್ನು ಕೌನ್ಸಿಲಿಂಗ್ ಮುಖಾಂತರ ಆಯ್ಕೆ ಮಾಡಿ ಸಂಸ್ಥೆಗಳಗೆ ನಿಯೋಜಿಸತಕ್ಕದ್ದು. ಸ್ವಂತ ಆಸ್ಪತ್ರೆ : ನಿಗದಿತ ಮೂಲಭೂತ ಸೌಕರ್ಯ ಹೊಂದಿರುವ ಸಂಸ್ಥೆಗಳಗೆ ಆದ್ಯತೆ ನೀಡುವುದು.
(ಇ) ಅಭ್ಯರ್ಥಿಗಳು ಕೌನ್ಸಿಲಿಂಗ್ ಸಮಯದಲ್ಲಿ ಅವರ ಅರ್ಹತೆಗೆ ಸಂಬಂಧಿಸಿದ ಮೂಲ ಪ್ರಮಾಣ ಪತ್ರ ಗಳನ್ನು (ಜಾತಿ ಪ್ರಮಾಣ ಪತ್ರವು ಸೇರಿದಂತೆ) ಹಾಜರುಪಡಿಸತಕ್ಕದ್ದು.
(ಈ) ಕಳೆದ ಮೂರು ವರ್ಷಗಳಲ್ಲಿ ಉತ್ತಮ ಫಲಿತಾಂಶ ಪಡೆದಿರುವ ಸಂಸ್ಥೆಗಳಗೆ ಅಭ್ಯರ್ಥಿಗಳನ್ನು ನಿಯೋಜಿಸುವುದು.
(ಉ)ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನು ಆಗಸ್ಟ್ ತಿಂಗಳೊಳಗೆ ಪೂರ್ಣಗೊಳಸತಕ್ಕದ್ದು.

(16) ಕೌನ್ಸಿಲಿಂಗ್ ಮುಖಾಂತರ ಪ್ರವೇಶ ಪಡೆಯದೇ ಖಾಸಗಿ ಸಂಸ್ಥೆಗಳಲ್ಲಿ ನೇರವಾಗಿ ಸ್ವಂತ ಪ್ರವೇಶ ಪಡೆದ ಅಭ್ಯರ್ಥಿಗಳು ಈ ಯೋಜನೆಯಡಿ ಆರ್ಥಿಕ ಸಹಾಯ ಪಡೆಯಲು ಅರ್ಹರಿರುವುದಿಲ್ಲ. ಆದರೆ, ಅಂತಹ ಅಭ್ಯರ್ಥಿಗಳು ವಿದ್ಯಾರ್ಥಿ ವೇತನಕ್ಕೆ ಅರ್ಹರಿದ್ದಲ್ಲಿ ಪ್ರತ್ಯೇಕವಾಗಿ ಪಡೆಯಬಹುದು.

(17) ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಈ ಯೋಜನೆಯಡಿ ಆರ್ಥಿಕ ಸಹಾಯ ಮಂಜೂರು ಮಾಡಿ ವಿತರಿಸುವ ಅಧಿಕಾರ ಹೊಂದಿರುತ್ತಾರೆ. ಈ ರೀತಿ ನಿಯೋಜಿಸುವ ಅಭ್ಯರ್ಥಿಗಳ ಮೂಲ ಅರ್ಜಿಗಳಲ್ಲದೆ ಶಾಲಾ ಕಾಲೇಜುಗಳ ವಿವರ ಹಾಗೂ ಇತರೆ ಮಾಹಿತಿಯನ್ನು ಪ್ರತ್ಯೇಕ ರಿಜಿಸ್ಟರ್‌ನಲ್ಲಿ ನಿರ್ವಹಿಸತಕ್ಕದ್ದು. ಈ ರಿಜಿಸ್ಟರ್‌ನ್ನು ರಾಜ್ಯ ಮಟ್ಟದ ಅಧಿಕಾರಿಗಳು ಅವರ ತಪಾಸಣೆ ವೇಳೆಯಲ್ಲಿ ಪರಿಶೀಲಿಸತಕ್ಕದ್ದು.

(18) ಅಭ್ಯರ್ಥಿಯು ತರಬೇತಿಯನ್ನು ಮಧ್ಯದಲ್ಲಿ ಬಿಟ್ಟು ಹೋಗಲು ಇಚ್ಚಿಸಿದ್ದಲ್ಲಿ ಸಂಬಂಧಪಟ್ಟ ಪ್ರಾಂಶುಪಾಲರಿಂದ ಅನುಮತಿ ಪಡೆದು ರೂ.1000/- ಗಳ ದಂಡವನ್ನು ಅಭ್ಯರ್ಥಿಯು ಸ್ವಂತ ಖರ್ಚಿನಲ್ಲಿ ಪ್ಯಾರಾ ಮೆಡಿಕಲ್ ಬೋರ್ಡಿಗೆ ಪಾವತಿಸಬೇಕಾಗಿರುತ್ತದೆ.

(19) ಅಭ್ಯರ್ಥಿಯು ತರಬೇತಿಯನ್ನು ಮಧ್ಯದಲ್ಲಿ ಬಿಟ್ಟು ಹೋಗಲು ಇಚ್ಚಿಸಿದ್ದಲ್ಲಿ ಅಲ್ಲಿಯವರೆವಿಗೂ ಇಲಾಖೆಯು ಅಭ್ಯರ್ಥಿಗೆ ಖರ್ಚು ಮಾಡಿರುವ ಶುಲ್ಕ ಮತ್ತು ಇತರೆ ವೆಚ್ಚವನ್ನು ವಸೂಲಿ ಮಾಡಿ ಸರ್ಕಾರದ ಲೆಕ್ಕಶೀರ್ಷಿಗೆ ಜಮೆ ಮಾಡಿದ ನಂತರವೇ ಮೂಲ ದಾಖಲಾತಿಗಳನ್ನು ಹಿಂತಿರುಗಿಸುವುದು. ಈ ಷರತ್ತಿಗೆ ಒಪ್ಪಿರುವುದಾಗಿ ವಿದ್ಯಾರ್ಥಿ ಮತ್ತು ಅವರ ತಂದೆ/ತಾಯಿ ಅಥವಾ ಪೋಷಕರು ರೂ.50/-ಗಳ ಛಾಪಾ ಕಾಗದದಲ್ಲಿ ಒಪ್ಪಿಗೆ ಪತ್ರ ನೀಡತಕ್ಕದ್ದು. ಈ ಬಗ್ಗೆ ಅಬ್ಯರ್ಥಿಗಳಿಗೆ ಆಯ್ಕೆ ಸಮಯದಲ್ಲಿ ಸರಿಯಾದ ತಿಳುವಳಿಕೆಯನ್ನು ನೀಡುವುದು.

(20) ಅಭ್ಯರ್ಥಿಗಳನ್ನು ನಿಯೋಜಿಸುವ ಪ್ಯಾರಾ ಮೆಡಿಕಲ್ ಕಾಲೇಜುಗಳು ಆಡಳಿತ ಮಂಡಳಿ ಮತ್ತು ಪ್ರಾಂಶುಪಾಲರುಗಳಿಂದ ರೂ.100/- ಗಳನ್ನು ಛಾಪಾ ಕಾಗದದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ನಿಗದಿಪಡಿಸಿದ ಶುಲ್ಕಕ್ಕೆ ವಿದ್ಯಾರ್ಥಿಗಳಿಗೆ ಒಳ್ಳೆಯ ಗುಣಮಟ್ಟದ ತರಬೇತಿ ನೀಡುವುದಾಗಿ ಹಾಗೂ ಯಾವುದೇ ಅಹಿತಕರ ಘಟನೆಗಳಿಗೆ ಆಡಳಿತ ಮಂಡಳಿಯೇ ಜವಾಬ್ದಾರರಗಿರುತ್ತಾರೆಂಬ ಷರತ್ತುಗಳಿಗೆ ಒಪ್ಪಿರುವುದಾಗಿ ಭರಿಸಿಕೊಂಡು ಅದನ್ನು ಸಂಬಂಧಪಟ್ಟ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಧೃಡೀಕರಣದೊಂದಿಗೆ ಕಛೇರಿ ಕಡತಗಳಲ್ಲಿ ನಿರ್ವಹಿಸತಕ್ಕದ್ದು.

ಈ ಆದೇಶವು 2011-12ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುತ್ತದೆ.

ಆ ಸಂಬಂಧ ವೆಚ್ಚವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ರಾಜ್ಯವಲಯ ಯೋಜನೆಯ ಲೆಕ್ಕಶೀರ್ಷಿಕೆ 2225-03-277-2-57ರಡಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ:ಆಇ 438/ವೆಚ್ಚ-3/2011 ದಿನಾಂಕ:17.08.2011ರ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಎಂ.ಬಾಟೆ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:

1) ಮಹಾಲೇಖಪಾಲರು, (ಱ ಮತ್ತು ಇ), ಲೆಕ್ಕ ಪರಿಶೋಧನೆ-1, ಲೆಕ್ಕ ಪರಿಶೋಧನೆ-2, ಕರ್ನಾಟಕ, ಪಾರ್ಕ್‌ಹೌಸ್, ಬೆಂಗಳೂರು
2) ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.

3) ನಿರ್ದೇಶಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.

4) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ

5) ಎಲ್ಲಾ ಜಿಲ್ಲಾಧಿಕಾರಿಗಳು. ( ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಮುಖಾಂತರ).

6) ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು. ( ಆಯುಕ್ತರು,, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಮುಖಾಂತರ).

7) ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ( ಆಯುಕ್ತರು,, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಮುಖಾಂತರ).

8) ಸರ್ಕಾರದ ಅಧೀನ ಕಾರ್ಯದರ್ಶಿ-1, 2 ಮತ್ತು 3, ಸಮಾಜ ಕಲ್ಯಾಣ ಇಲಾಖೆ.

9) ಸರ್ಕಾರದ ಅಧೀನ ಕಾರ್ಯದರ್ಶಿ ಆರ್ಥಿಕ ಇಲಾಖೆ, ವೆಚ್ಚ- (3 & 9) ವಿಧಾನ ಸೌಧ, ಬೆಂಗಳೂರು.

10) ಶಾಖಾ ರಕ್ಷಾ ಕಡತ

11) ಹೆಚ್ಚುವರಿ ಪ್ರತಿ-03